# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

## ಸಿ.ಸಿ. ಸಂಖ್ಯೆ : 369/2023

**ಚಾಸಾ-4**

**ಫ್ರಾಸಾ-2**

**ಹೆಸರು** : ಧರ್ಮ ಕೆ ಎಂ

**ತಂದೆಯ ಹೆಸರು** : ಮುತ್ತೇಗೌಡ

**ವಯಸ್ಸು** : 38 ವರ್ಷ

**ಉದ್ಯೋಗ** : ಪೋಲಿಸ್ ಪೇದೆ, ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

**ವಾಸಸ್ಥಳ** : ವಿರಾಜಪೇಟೆ

**ದಿನಾಂಕ ಃ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

1. ನಾನು ದಿನಾಂಕ 16-08-2021 ರಿಂದ ದಿನಾಂಕ 18-12-2025 ರವರೆಗೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 27-02-2023 ರಂದು ಚಾಸಾ-1 ರವರು ನನ್ನನ್ನು, ಚಾಸಾ3 ಹಾಗೂ 5 ರವರನ್ನು ಕರೆದುಕೊಂಡು ವಿರಾಜಪೇಟೆ ನಗರದಲ್ಲಿ ರೌಂಡ್ಸ್ ಕರ್ತವ್ಯದಲ್ಲಿರುವಾಗ ಬಾತ್ಮಿದಾರರು ಚಾಸಾ-1 ರವರಿಗೆ ಕರೆ ಮಾಡಿ, ವಿರಾಜಪೇಟೆ ನಗರದ ಕಾವೇರಿ ಕಾಲೇಜು ಬಳಿಯಿರುವ ಸಾರ್ವಜನಿಕ ಬಸ್ ತಂಗುದಾಣದಲ್ಲಿ ಸಾರ್ವಜನಿಕರಿಗೆ ಮಧ್ಯವನ್ನು

ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದ ಮೇರೆಗೆ, ನಾವುಗಳು ಠಾಣೆಗೆ ತೆರಳಿ, ನಂತರ ಚಾಸಾ-1 ರವರು ಮೊಕದ್ದಮೆ ದಾಖಲಿಸಿ, ಪಂಚರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ, ಪಂಚರಾಗಲು ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿದ್ದು, ನಾನು, ಚಾಸಾ1, 2, 3, 5 ಹಾಗೂ ಪಂಚರೊಂದಿಗೆ ಇಲಾಖಾ ಜೀಪಿನಲ್ಲಿ ಸಮಯ ಮಧ್ಯಾಹ್ನ 1.15 ಗಂಟೆಗೆ ಹೊರಟು ಸುಮಾರು 1.25 ಗಂಟೆಗೆ ಆರ್ಜಿ ಗ್ರಾಮದ ಕಾವೇರಿ ಕಾಲೇಜಿನ ಬಳಿ ತಲುಪಿ, ಮರೆಯಲ್ಲಿ ಜೀಪನ್ನು ನಿಲ್ಲಿಸಿ, ನಮ್ಮನ್ನು ಹಾಗೂ ಪಂಚರನ್ನು ಸಾರ್ವಜನಿಕ ಬಸ್ ತಂಗುದಾಣದ ಬಳಿ ಕರೆದುಕೊಂಡು ಹೋದಾಗ ಬಸ್ ತಂಗುದಾಣದ ಒಳಗೆ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದು, ಆತನು ನಮ್ಮನ್ನು ಕಂಡು ಓಡಿ ಹೋಗಲು ಪ್ರಯತ್ನಿಸಿದ್ದು, ನಾವುಗಳು ಆತನನ್ನು ಸುತ್ತುವರೆದು, ಚಾಸಾ1 ರವರು ಸದರಿ ವ್ಯಕ್ತಿಯ ಹೆಸರು ಹಾಗೂ ವಿಳಾಸವನ್ನು ಕೇಳಲಾಗಿ, ಅಪ್ಪಯ್ಯ ಎಂದು ಹೇಳಿ ಅವರ ವಿಳಾಸವನ್ನು ತಿಳಿಸಿರುತ್ತಾರೆ.

3. ನಂತರ ಚಾಸಾ-1 ರವರು ಇಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದೀಯಾ ಎಂದು ಕೇಳಲಾಗಿ, ಆತನು ಮಧ್ಯ ಮಾರುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಪರವಾನಗಿ ಇದೆಯೇ ಎಂದು ಕೇಳಲಾಗಿ, ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಯು ಬಸ್ ತಂಗುದಾಣದ ಒಳಗೆ ಕಟ್ಟೆಯ ಮೇಲೆ ಇಟ್ಟಿದ್ದ ಬಿಳಿ ಬಣ್ಣದ ಬ್ಯಾಗ್ ನ್ನು ಹಾಜರುಪಡಿಸಿದ ಮೇರೆಗೆ ಪಂಚರ ಸಮಕ್ಷಮ ನೋಡಲಾಗಿ 48 ಮಧ್ಯ ತುಂಬಿದ 90 ಎಂ ಎಲ್ ನ ಸಿಲ್ವರ್ ಕಪ್ ಇಂಡಿಯನ್ ಬ್ರಾಂಡಿ ಇರುವುದು ಕಂಡು ಬಂದಿರುತ್ತದೆ. ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳ ಪೈಕಿ 28 ಟೆಟ್ರಾ ಪ್ಯಾಕೆಟ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಅದಕ್ಕೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ, ಆರ್ ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಳ್ಳಲಾಯಿತು.

4. ಇನ್ನುಳಿದ 20 ಟೆಟ್ರಾ ಪ್ಯಾಕೆಟ್‌ಗಳು, ಆರೋಪಿ ಹಾಜರುಪಡಿಸಿದ ರೂ. 350/- ಗಳು ಹಾಗೂ ಬಳಿ ಬಣ್ಣದ ಬಟ್ಟೆ ಬ್ಯಾಗ್ ನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಹಿಯಿರುವ ಚೀಟಿಯನ್ನು ಅಂಟಿಸಲಾಯಿತು. ಸದರಿ ಮಹಜರನ್ನು ಮಧ್ಯಾಹ್ನ 1.30 ರಿಂದ 2.30 ರವರೆಗೆ ಜರುಗಿಸಲಾಯಿತು. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ನಂತರ ಈ ಎಲ್ಲಾ ಸಂಗತಿಗಳ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

5. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ**3** ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ**3**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ **4** ರಿಂದ **6** ಎಂದು ಗುರುತಿಸಲಾಗಿದೆ. ಸಾಕ್ಷಿಯು ವಶಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ಮು ಮಾ **1** ಎಂದು ಗುರುತಿಸಲಾಗಿದೆ.

ಮುಖ್ಯ ವಿಚಾರಣೆ ಮುಕ್ತಾಯ.

**<u>ಪಾಟಿ ಸವಾಲು ಃ ಆರೋಪಿ ಪರ ಶ್ರೀ. ಹೆಚ್ ಆರ್ ಎ ವಕೀಲರಿಂದ ಃ</u>**

1. ಬೆಳಿಗ್ಗೆ 11.30 ಗಂಟೆಗೆ ನಾನು ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ಮಾಹಿತಿಯು ಬೆಳಿಗ್ಗೆ 11.50 ರಿಂದ 12.00 ಗಂಟೆಯ ಮಧ್ಯೆದಲ್ಲಿ ಬಂದಿರುತ್ತದೆ. ವಿರಾಜಪೇಟೆ ದೊಡ್ಡಟ್ಟಿ ಚೌಕಿಯಲ್ಲಿದ್ದಾಗ ಮಾಹಿತಿ ಬಂದಿರುತ್ತದೆ. ಕೃತ್ಯ ಸ್ಥಳಕ್ಕೆ ಮಧ್ಯಾಹ್ನ 1.25 ಕ್ಕೆ ಹೋಗಿರುತ್ತೇವೆ.

ದಾಳಿಗೆ ಹೋಗುವ ಪೂರ್ವದಲ್ಲಿ ಪೊಲೀಸ್ ಠಾಣೆಗೆ ಹೋಗಿ ನಂತರ ಪಂಚರನ್ನು ಬರಮಾಡಿಕೊಂಡು ಅವರನ್ನು ಕರೆದುಕೊಂಡು ದಾಳಿಗೆ ಹೋಗಿರುತ್ತೇವೆ. ಕೃತ್ಯ ಸ್ಥಳದ ಪಕ್ಕದಲ್ಲಿ ಕಾವೇರಿ ಕಾಲೇಜು, ಬಸ್ ತಂಗುದಾಣ ಇದೆ ಎಂದರೆ ಸರಿ.

2. ಕೃತ್ಯ ಸ್ಥಳದ  ಎದುರುಗಡೆ ಮನೆಗಳಿವೆ ಎಂದರೆ ಸರಿ. ಆರೋಪಿಯು ಬಸ್ ತಂಗುದಾಣದ ಒಳಗಡೆ ಕುಳಿತ್ತಿದ್ದನು, ಆತನ ಪಕ್ಕದಲ್ಲಿ ಒಂದು ಚೀಲವಿತ್ತು. ಅದು ಬಿಳಿ ಬಣ್ಣದ ಬಟ್ಟೆ ಚೀಲವಾಗಿರುತ್ತದೆ. ಆರೋಪಿಯು ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿರುತ್ತಾರೆ. ನಾವು ಆತನನ್ನು ಸುತ್ತುವರೆದು ಹಿಡಿದುಕೊಂಡಿರುತ್ತೇವೆ. ಆರೋಪಿಯು ಚೀಲವನ್ನು ತೆಗೆದು ಚಾಸಾ1 ರವರಿಗೆ ನೀಡಿರುತ್ತಾರೆ. ನಾನು ಆ ದಿನ ಕೃತ್ಯ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ3ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ, ಈ ಪ್ರಕರಣಕ್ಕೂ ಹಾಗೂ ಮು ಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಿಂದ ಬೆರಳಚ್ಚು  ಪಡಿಸಲಾಯಿತು.)

ಓ ಹೇ ಕೇ ಸ ಇದೆ,                                    ಸಹಿ/-

(ಪ್ರದೀಪ ಪೋತದಾರ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ.,  ವಿರಾಜಪೇಟೆ